ಬೆಂಗಳೂರು ನಗರದಲ್ಲಿ ಹೆಚ್ಚಾಗುತ್ತಿರುವ ಪರಿಸರ ಮಾಲಿನ್ಯ.

೨೧೦೮(೨೮೯೭)

ಶ್ರೀ ದಿನೇಶ್ ಗುಂಡುರಾವ್(ಗಾಂಧಿನಗರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಹೆಚ್ಚಾಗುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ ಸರ್ಕಾರಕ್ಕೆ ಅರಿವಿದೆಯೇ?

ಆ) ಹಾಗಿದ್ದಲ್ಲಿ ಜನರ ಬದುಕಿಗೆ ತೀವ್ರ ಧಕ್ಕೆ ತರುತ್ತಿರುವ ಮಾಲಿನ್ಯದ ವಿಧಗಳು ಯಾವುವು? ಪರಿಸರಕ್ಕೆ ಧಕ್ಕೆ ತರುತ್ತಿರುವ ಮಾಲಿನ್ಯದ ವಿಧಗಳು ಯಾವುವು ಮತ್ತು ಅವುಗಳ ಪ್ರತಿಕೂಲ ಪರಿಣಾಮದ ಪ್ರಮಾಣ ಎಷ್ಟು?

ಇ) ವಿವಿಧ ರೀತಿಯ ಈ ಪರಿಸರ ಮಾಲಿನ್ಯಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ರಚನಾತ್ಮಕ ಕಾರ್ಯಕ್ರಮಗಳೇನು?

ಈ) ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು ನಿರೀಕ್ಷಿತ ಫಲ ನೀಡದಿರಲು ಕಾರಣಗಳೇನು?

ಶ್ರೀ ಕೆ.ಎಚ್.ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು.

ಆ) ೧. ಜನರ ಬದುಕಿಗೆ ತೀವ್ರ ಧಕ್ಕೆ ತರುತ್ತಿರುವ ಮಾಲಿನ್ಯದ ವಿಧಗಳೆಂದರೆ, ವಾಯು ಮಾಲಿನ್ಯ ಜಲ ಮಾಲಿನ್ಯ, ಶಬ್ದ ಮಾಲಿನ್ಯ ಹಾಗೂ ನಿರುಪಯುಕ್ತ ಘನ ತ್ಯಾಜ್ಯ ವಸ್ತುಗಳು.

೨. ಪರಿಸರಕ್ಕೆ ಧಕ್ಕೆ ತರುತ್ತಿರುವ ಮಾಲಿನ್ಯದ ವಿಧಗಳೆಂದರೆ:

1) ಕಾರ್ಖಾನೆಗಳಿಂದ ಹೊರ ಹೊಮ್ಮುವ ಮಾಲಿನ್ಯ.

2) ಹೆಚ್ಚುತ್ತಿರುವ ವಾಹನಗಳ ಸಂಖ್ಯೆ ಹಾಗೂ ಇವುಗಳಿಂದ ಹೊರಹೊಮ್ಮುವ ಹೊಗೆ.

3) ಬೆಂಗಳೂರು ನಗರದಲ್ಲಿ ಉತ್ಪತ್ತಿಯಾಗುವ ನಿರುಪಯುಕ್ತ ಘನ ತ್ಯಾಜ್ಯ ವಸ್ತುಗಳು.

ಇ) ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು ಹಾಗು ಜಲ ಮಾಲಿನ್ಯ

ಘಟಕಗಳಿಂದ ಹೊರ ಬರುವ ಮಾಲಿನ್ಯಕಾರಕಗಳನ್ನು ಮಾಪನ ಮಾಡುತ್ತಿದ್ದು ಸದರಿ ವಿಷಯದಲ್ಲಿ ಕಾರ್ಖಾನೆಗಳು ಉಲ್ಲಂಘನೆ ಮಾಡಿದ ಪಕ್ಷದಲ್ಲಿ ಜಲ ಮತ್ತು ವಾಯು ಕಾಯ್ದೆಯಡಿ ಕಾನೂನಿನ ಕ್ರಮ ಜರುಗಿಸಲಾಗುತ್ತಿದೆ. ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸದೆ ಇರುವ ಉದ್ದಿಮೆಗಳ ಮೇಲೆ ಕಾನೂನಿನಲ್ಲಿ ಇರುವಂತೆ ತಡೆಯಾಜ್ಞೆ ಮುಚ್ಚುವ ಆಜ್ಞೆ ನೀರು ಮತ್ತು ವಿದ್ಯುಚ್ಛಕ್ತಿ ನಿಲ್ಲಿಸುವಂತೆ ಆದೇಶಿಸುವುದು. ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವುದು ಇತ್ಯಾದಿ ರೀತಿಯಲ್ಲಿ ಕ್ರಮ ಜರುಗಿಸಲಾಗುತ್ತಿದೆ. ಪರಿಸರ (ಸಂರಕ್ಷಣೆ) ಕಾಯ್ದೆ ೧೯೮೬ರ ಅಡಿಯಲ್ಲಿ ಸೂಚಿಸಿರುವಂತೆ ಮೋಟಾರು ವಾಹನ ನಿಯಮ ೧೯೮೯ನ್ನು ಜಾರಿಗೊಳಿಸುವುದು ರಾಜ್ಯ ಸಾರಿಗೆ ಇಲಾಖೆಯದಾಗಿರುತ್ತದೆ. ಈ ಪ್ರಕಾರ ವಾಹನಗಳಿಂದ ಹೊರ ಹೊಮ್ಮುವ ಹೊಗೆಯನ್ನು ನಿಯಂತ್ರಿಸಲು: ತಡೆಗಟ್ಟಲು ಸಾರಿಗೆ ಮತ್ತು ಪೋಲೀಸ್ ಇಲಾಖೆಗಳು ಅಧಿಕಾರವನ್ನು ಹೊಂದಿರುತ್ತದೆ. ಮಂಡಳಿಯು ಸಾರಿಗೆ ಇಲಾಖೆಗೆ ವಾಹನಗಳಿಂದ ಹೊರಬರುವ ಮಾಲಿನ್ಯ ಅಳೆಯುವ ಯಂತ್ರೋಪಕರಣಗಳನ್ನು ನೀಡಿದೆ ಹಾಗೂ ಹಲವಾರು ಅಧಿಕಾರಿಗಳಿಂದ ತರಬೇತಿ ಸಹ ನೀಡಿದೆ.

ಬೆಂಗಳೂರು ನಗರದಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳ ಶೇಖರಣೆ ಮತ್ತು ವಿಲೇವಾರಿ ಮಹಾನಗರ ಪಾಲಿಕೆ ಮಂಡಳಿಗೆ ಸೇರಿದ್ದು ಈಗಾಗಲೇ ಕಾನೂನಿನಡಿ ಐದು ವಿಲೇವಾರಿಗೆ ಸಂಬಂಧಿಸಿದ ಸ್ಥಳಗಳನ್ನು ಗುರುತಿಸಲಾಗಿದೆ.

ಈ) ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳು ನಗರದ ಒಳ ಭಾಗದಲ್ಲಿ ಇದ್ದು ಶಬ್ದ ಮಾಲಿನ್ಯಗಳನ್ನು ತಡೆಗಟ್ಟಲು ತಕ್ಕ ನಿಯಂತ್ರಣ ಉಪಕರಣಗಳನ್ನು ಅಳವಡಿಸಿರುವುದಿಲ್ಲ.

ಮಂಡಳಿಯ ವಾಯು(ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯ್ದೆ ೧೯೮೧ ಹಾಗು ಪರಿಸರ (ಸಂರಕ್ಷಣೆ ಮತ್ತು ನಿವಾರಣೆ) ಕಾಯ್ದೆ ೧೯೮೬ರಲ್ಲಿ ಇರುವಂತೆ ವಾಯು ಮಾಪನ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ. ಸದರಿ ಮಾಪನ ಕೇಂದ್ರಗಳಿಂದ ಲಭ್ಯವಾದ ಮಾಹಿತಿಯ ಅನುಸಾರ ದಿನೇ ದಿನೇ ವಾಹನಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ವಾಹನಗಳ ಮಾಲಿನ್ಯವನ್ನು ನಿರೀಕ್ಷಿತ ಮಟ್ಟಕ್ಕೆ ತರಲು ಸಾಧ್ಯವಾಗುತ್ತಿಲ್ಲ.

ನಗರದಲ್ಲಿ ಉತ್ಪತ್ತಿಯಾಗುವ ಮಲಿನ ನೀರು ಸಮರ್ಪಕವಾಗಿ ಒಳ ಚರಂಡಿ ಮೂಲಕ ಶುದ್ಧೀಕರಣ ಘಟಕಗಳಿಗೆ ಸರಬರಾಜು ಆಗದೆ ಇರುವುದು ಹಾಗು ಅನೇಕ ಸಣ್ಣ ಕಣಿವೆಗಳಿಗೆ ಶುದ್ಧೀಕರಣ ಘಟಕ ಅಳವಡಿಸಲು ವಿಳಂಬವಾಗಿ ಜಲ ಮಾಲಿನ್ಯಕ್ಕೆ ಕಾರಣವಾಗಿದೆ. ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ನಗರದಲ್ಲಿ ಉತ್ಪತ್ತಿಯಾಗುವ ಘನ ವಸ್ತುಗಳ ಶೇಖರಣೆ ಮತ್ತು ವಿಲೇವಾರಿ ಕ್ರಮಗಳನ್ನು ಕಾರ್ಯಗತಗೊಳಿಸದೆ ಇರುವುದರಿಂದ ನಿರೀಕ್ಷಿತ ಫಲ ನೀಡದಿರಲು

ಕಾರಣಗಳಾಗಿರುತ್ತವೆ.

ಅಥಣಿ ತಾಲ್ಲೂಕಿನ ಗ್ರಾಮಗಳಲ್ಲಿ ಬಯಲು ರಂಗಮಂದಿರ ನಿರ್ಮಾಣ.

೨೧೧೦(೩೦೦೨)

ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್(ಅಥಣಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಥಣಿ ತಾಲ್ಲೂಕಿನ ಗ್ರಾಮಗಳಲ್ಲಿ ಬಯಲು ರಂಗ ಮಂದಿರ ನಿರ್ಮಾಣಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರೂ.೦.೫೦ ಲಕ್ಷ ಹಣ ಬಿಡುಗಡೆ ಮಾಡಲಾಗಿದೆಯೆ?

ಆ) ಬಯಲು ರಂಗಮಂದಿರ ನಿರ್ಮಾಣವಾಗದಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರಿಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು):

ಅ) ಹೌದು.

ಆ) ಹೌದು.

ಇ) ಒಟ್ಟು ಐದು ಬಯಲು ರಂಗ ಮಂದಿರಗಳಲ್ಲಿ ನಾಲ್ಕು ಪ್ರಗತಿಯ ವಿವಿಧ ಹಂತಗಳಲ್ಲಿದ್ದು, ಒಂದು ಬಯಲು ರಂಗ ಮಂದಿರದ ನಿರ್ಮಾಣ ಕಾರ್ಯ ಮಾತ್ರ ಪ್ರಾರಂಭವಾಗಿಲ್ಲ. ಕೂಡಲೇ ಪ್ರಾರಂಭಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲಾಗಿದೆ.

ಅಥಣಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಗರಡಿಮನೆ ಮತ್ತು ಸಂಗೀತವಾದ್ಯ ಉಪಕರಣಗಳ ಪೂರೈಕೆಯ ಬಗ್ಗೆ.

೨೧೧೧(೩೦೦೩)